ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರ ಒದಗಿಸಿದ್ದಾರೆ. ಆದರೆ ಎಲ್ಲಾ ಸಬ್ ರಿಜಿಸ್ಟ್ರಾರ್‌ಗಳಲ್ಲಿ 2 ಗುಂಟೆ ಜಮೀನನ್ನು ರಿಜಿಸ್ಟರ್ ಮಾಡಿಕೊಳ್ಳುತ್ತಿಲ್ಲ. ರಿಜಿಸ್ಟರ್ ಮಾಡಿಕೊಳ್ಳುವಂತೆ ಸರ್ಕಾರವು ಕಟ್ಟುನಿಟ್ಟಿನ ಒಂದು ಆದೇಶ ಕೊಡಬೇಕೆಂದು ಕೋರುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೇ, ಹಿಂದೆ ಫ್ರಾಗ್‌ಮೆಂಟೇಷನ್ ಆಕ್ಟ್ ಇತ್ತು. ಆ ಆಕ್ಟ್ ಹೋದ ಮೇಲೆ, ಎಲ್ಲೂ ಕೂಡ ರಿಜಿಸ್ಟರ್ ಮಾಡಬೇಡಿ ಎಂದು ಸರ್ಕಾರ ಸೂಚನೆ ಕೊಟ್ಟಿಲ್ಲ. ಆದರೂ ಕೂಡ ಮಾನ್ಯ ಸದಸ್ಯರು ಕೋರುವಂತೆ ಇನ್ನೊಮ್ಮೆ ಒಂದು ಸುತ್ತೋಲೆಯನ್ನು ಸಬ್ ರಿಜಿಸ್ಟ್ರಾರ್ ಕಛೇರಿಗೆ ಕಳುಹಿಸತಕ್ಕ ವ್ಯವಸ್ಥೆಯನ್ನು ಸಧ್ಯದಲ್ಲೇ ನಾನು ಮಾಡುತ್ತೇನೆ.

ಶಿಡ್ಲಘಟ್ಟ ತಾಲ್ಲೂಕು ಆನೇಮಡಗು ಗ್ರಾಮಕ್ಕೆ ಸಂಬಂಧಿಸಿದಂತೆ ದಾಖಲಾಗಿರುವ ಕ್ರಿಮಿನಲ್ ಮೊಕದ್ದಮೆಗಳ ಕುರಿತು

1 - ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಡ್ಲಘಟ್ಟ ತಾಲ್ಲೂಕು ದಿಬ್ಬೂರುಹಳ್ಳಿ ಪೋಲೀಸ್ ಸ್ಟೇಷನ್ ವ್ಯಾಪ್ತಿಯಲ್ಲಿ ಆನೇಮಡಗು ಗ್ರಾಮವಿರುವುದು ನಿಜವೇ?

ಆ) ಸದರಿ ಗ್ರಾಮದಲ್ಲಿ 1967 ರಿಂದ 1989 ರವರೆಗೆ ದಾಖಲಾಗಿರುವ ಕ್ರಿಮಿನಲ್ ಮೊಕದ್ದಮೆಗಳ ಸಂಖ್ಯೆ ಎಷ್ಟು?

ಇ) 1989 ರಿಂದ ಇಲ್ಲಿಯವರೆಗೆ ದಾಖಲಾಗಿರತಕ್ಕಂತಹ ಕ್ರಿಮಿನಲ್ ಮೊಕದ್ದಮೆಗಳೆಷ್ಟು? ಒಂದು ವೇಳೆ 1989ರಿಂದ ಈಚೆಗೆ ಹೆಚ್ಚು ಕ್ರಿಮಿನಲ್ ಮೊಕದ್ದಮೆಗಳ ಆ ಗ್ರಾಮದಲ್ಲಿರುವ ಜನರ ಮೇಲೆ ದಾಖಲಾಗಿದ್ದರೆ ಅದಕ್ಕೆ ಕಾರಣಗಳೇನು?

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ಹೌದು.

ಆ) 1967 ರಿಂದ 1989ರ ವರೆಗೆ ಈ ಗ್ರಾಮದಿಂದ 7 ಕ್ರಿಮಿನಲ್ ಮೊಕದ್ದಮೆಗಳು ದಾಖಲಾಗಿರುತ್ತವೆ.

ಇ) 1989ರಿಂದ ಇಲ್ಲಿಯವರೆಗೆ ಆನೇಮಡಗು ಗ್ರಾಮದಿಂದ 42 ಕ್ರಿಮಿನಲ್ ಮೊಕದ್ದಮೆಗಳು ದಾಖಲಾಗಿರುತ್ತದೆ.

ಅಪರಾಧಗಳು ಹೆಚ್ಚಲು ರಾಜಕೀಯ ದ್ವೇಷಗಳೇ ಮುಖ್ಯ ಕಾರಣವಾಗಿರುತ್ತದೆ.

ಶ್ರೀ ಹೆಚ್. ಶಿವಪ್ಪ : ಮಾನ್ಯ ಅಧ್ಯಕ್ಷರೇ, ಸದರಿ ಶಿಡ್ಲಘಟ್ಟ ತಾಲ್ಲೂಕು ಇಂತಹ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಬರುತ್ತದೆಯೇ ಎಂಬ ನನ್ನ ಪ್ರಶ್ನೆಗೆ 'ಹೌದು' ಎಂದು ಹೇಳಿದ್ದಾರೆ. ಅವರು

ಹೇಳುವುದು ಸರಿ. ಸದರಿ ಗ್ರಾಮದಲ್ಲಿ 1967ರಿಂದ 1987ರವರೆಗೆ ದಾಖಲಾತಿಯಾಗಿರುವ ಕ್ರಿಮಿನಲ್ ಮೊಕದ್ದಮೆಗಳ ಸಂಖ್ಯೆ ಎಷ್ಟು ಅಂದರೆ ಕೇವಲ ಏಳು ಮಾತ್ರ. 1989ರಿಂದ 1994ರವರೆಗೆ ಕ್ರಿಮಿನಲ್ ಮೊಕದ್ದಮೆಗಳು 42-45 ಕೇಸ್‌ಗಳವರೆಗೆ ದಾಖಲಾಗಿವೆ. ಈ ಕೇಸುಗಳನ್ನೆಲ್ಲಾ ಏನಾದರೂ ರಾಜಕೀಯ ಶಕ್ತಿಯ ಪ್ರಚೋದನೆ ಆಧಾರದ ಮೇಲೆ ಆಗಿವೆಯೋ? ಅಥವಾ ಬೇರೆ ಕಾರಣಗಳಿಂದ ಆಗಿದ್ಯಾವೋ? ಇದಕ್ಕೆ ಯಾವುದಾದರೂ ಶಕ್ತಿ ಇದೆಯೇ? ಇದರ ಬಗ್ಗೆ ಸರ್ಕಾರ ಏನಾದರೂ ಚಿಂತನೆ ಮಾಡಿದೆಯೇ? 22 ವರ್ಷಗಳಲ್ಲಿ ಕೇವಲ ಏಳು ಪ್ರಕರಣಗಳು ದಾಖಲಾದರೆ 8 ವರ್ಷದಲ್ಲಿ 45 ಕೇಸ್‌ಗಳು ದಾಖಲಾಗಿವೆ. ಇದು ಬಹಳ ಅಬ್‌ನಾರ್ಮಲ್ ಆಗಿ ಕಾಣುವುದರಿಂದ, ಸರ್ಕಾರ ಏನಾದರೂ ಇದರ ಬಗ್ಗೆ ಗಮನ ಹರಿಸಿ, ಇಷ್ಟೊಂದು ಕೇಸ್‌ಗಳು ದಾಖಲಾಗಿರುವುದಕ್ಕೆ ಏನು ಕಾರಣ ಎಂಬುದನ್ನು ಏನಾದರೂ ಪತ್ತೆ ಹಚ್ಚಲಿಕ್ಕೆ ಪ್ರಯತ್ನ ಮಾಡಿದೆಯೇ?

ಶ್ರೀ ಆರ್. ರೋಷನ್‌ಬೇಗ್ : ಮಾನ್ಯ ಸಭಾಧ್ಯಕ್ಷರೇ, 1989ರಿಂದ ಇದುವರೆಗೂ ಕೇಸ್‌ಗಳು ಏಕೆ ಹೆಚ್ಚು ದಾಖಲಾಗಿವೆ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಇದರಲ್ಲಿ 6 ಕೇಸ್‌ಗಳು ಪರ್ಸನಲ್ ಡಿಸ್ಪ್ಯೂಟ್‌ಗೆ ಸಂಬಂಧಪಟ್ಟವು ಆಗಿವೆ. Political rivalry between the two-sitting MLA and Ex-MLA 25 cases. Security cases about 11 cases. ಆ ಹಳ್ಳಿಯಲ್ಲಿ 1989ರಲ್ಲಿ ವಿಧಾನ ಸಭಾ ಚುನಾವಣೆಗಳು ಆದಾಗ ಶ್ರೀ ಮುನಿಸ್ವಾಮಪ್ಪ ಎನ್ನುವವರು ಆ ಚುನಾವಣೆಯಲ್ಲಿ ಸೋತರು. ಕಾಂಗ್ರೆಸ್ ಪಾರ್ಟಿ ಕ್ಯಾಂಡಿಡೇಟ್ ಶ್ರೀ ಮುನಿಯಪ್ಪ ಎನ್ನುವವರು ಆ ಚುನಾವಣೆಯಲ್ಲಿ ಗೆದ್ದರು. ಆದಾದ ಮೇಲೆ ಅದೇ ಹಳ್ಳಿಯ ಸಾಕಷ್ಟು ಜನ ಜನತಾದಳದ ಸಪೋರ್ಟರ್‌ಗಳು ಕಾಂಗ್ರೆಸ್ ಜಾಯಿನ್ ಆದರು. Political rivarly between the sitting MLA and the Ex-MLA resulted in increase of cases.

ಶ್ರೀ ಹೆಚ್. ಶಿವಪ್ಪ : ಮೊಕದ್ದಮೆಯಾಗಿರುವ ಪ್ರಕರಣಗಳು ಏನಾದರೂ ಜಿನ್ಯೈನ್ ಕೇಸ್‌ಗಳೋ ಅಥವಾ ಫೇಕ್ / ಫಾಲ್ಸ್ ಕೇಸ್‌ಗಳೋ ಎನ್ನುವುದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳಬೇಕು. ಏಕ್‌ದಂ ಇಷ್ಟೊಂದು ಕ್ರಿಮಿನಲ್ ಮೊಕದ್ದಮೆಗಳು ಹೆಚ್ಚಲು ಕಾರಣವೇನು ಎಂಬುದನ್ನು ಸರ್ಕಾರ ಪತ್ತೆ ಹಚ್ಚಿ ಏನಾದರೂ ಅದರ ಬಗ್ಗೆ ಕ್ರಮ ತೆಗೆದುಕೊಂಡಿದೆಯೇ?

ಶ್ರೀ ಆರ್. ರೋಷನ್‌ಬೇಗ್ : ಮಾನ್ಯ ಅಧ್ಯಕ್ಷರೇ, ದಾಖಲಾಗಿರುವ ಪ್ರಕರಣಗಳೆಲ್ಲವೂ ಜಿನ್ಯೈನ್ ಕೇಸುಗಳೇ. ಸರ್ಕಾರದವರೂ ಈ ದಿಸೆಯಲ್ಲಿ ಪ್ರಯತ್ನ ಪಟ್ಟಿದ್ದಾರೆ. 1990ರಲ್ಲಿ (1) ಕೇಸು 1991ರಲ್ಲಿ....

MR. SPEAKER : Mr. Minister, there is a point in what the Hon'ble Member says. There is something which does not meet the eye. 22 ವರ್ಷಗಳ ಕಾಲ ಕೇವಲ ಏಳು ಪ್ರಕರಣಗಳು ದಾಖಲಾಗಿವೆ. 8 ವರ್ಷದಲ್ಲಿ 42 ಕೇಸ್‌ಗಳು ದಾಖಲಾಗಿವೆ. ಏನೇ ರೈವಲ್‌ರಿ ಅಥವಾ ಇನ್ನೊಂದು ಕಾರಣ ಇದ್ದರೂ ಕೂಡ this does not happen in the normal course. ಅದಕ್ಕೆ all that he intends is change of power, power structure in that taluk could have resulted in all this. ನಿಮ್ಮ ಅಧಿಕಾರಿಗಳು ಕೆಲವು ಸಲ ಅತ್ಯುತ್ಸಾಹದಿಂದ

ಕಾನೂನನ್ನೂ ಕೂಡ ಬದಿಗಿಟ್ಟು ಸ್ಥಳೀಯ ಒತ್ತಡಗಳಿಗೆ ಮಣಿದು ತಪ್ಪು ಮಾಡಿರತಕ್ಕಂತಹ ಅವಕಾಶಗಳೂ ಕೂಡ ಇರುತ್ತವೆ. I don't say they have done it in this case; could have taken place. Therefore, please get a detailed report as to what has happened, why it has happened. This is something which doesn't meet the eye. 22 ವರ್ಷಗಳಲ್ಲಿ 8 ಕೇಸುಗಳು, 8 ವರ್ಷಗಳಿಗೆ 42 ಕೇಸುಗಳು ಎಂದರೆ, kindly get a detailed report and give it to the Hon'ble Member. ಈಗ ಪ್ರಶ್ನೋತ್ತರ ವೇಳೆ ಮುಗಿಯಿತು.

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 39ನೇ ಪಟ್ಟಿಯಲ್ಲಿರುವ ಒಟ್ಟು 57 ಪ್ರಶ್ನೆಗಳ ಪೈಕಿ 46 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

Elections to Agricultural Produce Marketing Committees.

3983 - Sri. Araga Gnanedra (Thirthahalli) : Will the Minister of State for Agricultural Marketing be pleased to state?

a) *What is the reason for not conducting election to Chairman, Vice-Chairman even though elections to Agricultural Produce Market Committees were conducted some months back?*

b) *When elections to these posts are conducted?*

Sri H. Nagappa (Minister of State for Agricultural Marketing) :

a) Division Bench of the High Court of Karnataka in W.A. No. 3440/97 has ordered not to conduct election to the posts of Chairman and Vice-Chairman until disposal of W.P. No.15380/97.

b) Sub-judice.

ತೀರ್ಥಹಳ್ಳಿಯಲ್ಲಿ ಭೂ ನ್ಯಾಯ ಮಂಡಳಿಗೆ ಅಧಿಕಾರಿಯನ್ನು ನೇಮಕ

2984 - ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಭೂ ನ್ಯಾಯ ಮಂಡಳಿಗಳಲ್ಲಿ ಹಿಂದೆ ಸರ್ವೆಯರುಗಳು ಕೊರತೆಯಿಂದಾಗಿ ಅಳತೆಗೊಳಪಡಿಸುವ ಷರತ್ತಿಗೊಳಪಟ್ಟು ತೀರ್ಪು ನೀಡಿರುವ ಪ್ರಕರಣಗಳಲ್ಲಿ ಅಳತೆಯ ನಂತರ ಅಳತೆಯ ವ್ಯತ್ಯಾಸಗಳನ್ನು ಸರಿಪಡಿಸುವ ಬಗ್ಗೆ ರ್ಯಾಟಿಫಿಕೇಷನ್ ಆರ್ಡರ್ ಮಾಡಲು ಭೂ ಸುಧಾರಣಾ ಕಾಯ್ದೆಯಲ್ಲಿ ಅವಕಾಶವಿದೆಯೇ?*